> ರಹಸ್ಯಮಯತೆ ಸೃಜನಶೀಲ ಸಾಹಿತ್ಯದ ಒಂದು ಮುಖ್ಯ ಗುಣವೇ ಆಗಿದ್ದರೂ, ಅತಿ ಸಣ್ಣಕತೆಯಲ್ಲಿ ಇದರ ಪರಾಕಾಷ್ಠೆಯಿದೆ. ಮೊಂತೆರೆಸೋನ ವಿಶ್ವವಿಖ್ಯಾತ ಅತಿ ಸಣ್ಣಕತೆಯ ವ್ಯಾಖ್ಯಾನ ಎಷ್ಟು ಕಠಿನವಾದುದು ಎನ್ನುವುದನ್ನು ಸ್ವತಃ ದಿವಾಕರ ಅವರೇ ತೋರಿಸಿದ್ದಾರೆ.

ಕಥನದ ಈ ಭಾಗವನ್ನು ಮುಗಿಸುತ್ತದೆ: "ಸೂರ್ಯನನ್ನು ಒಂದು ಹಳದಿಯ ಉಂಡೆಯಾಗಿ ಪರಿವರ್ತಿಸುವ ಕಲಾವಿದರಿದ್ದಾರೆ, ನಿಜ. ಆದರೆ ತಮ್ಮ ಕಲೆಯಿಂದ, ಚಾತುರ್ಯದಿಂದ ಹಳದಿಯ ಉಂಡೆಯನ್ನು ಸೂರ್ಯನನ್ನಾಗಿ ರೂಪಾಂತರಿಸುವವರೂ ಇದ್ದಾರೆ". (ಪು. 168) ಆದರೆ, ಪ್ರಬಂಧ ವ್ಯಾನ್ ಗೋನಿಗೆ ಸೀಮಿತವಾಗಿಲ್ಲ. ಸೂರ್ಯಕಾಂತಿಯ ಚರಿತ್ರೆ, ಪ್ರಭೇಧಗಳು, ಅದರ ಸುತ್ತ ಬೆಳೆದಿರುವ ಕತೆಗಳು ಎಲ್ಲವನ್ನೂ ಒಳಗೊಂಡು ಬೆಳೆಯುತ್ತ ಹೋಗುತ್ತದೆ. ಪ್ರಬಂಧದ ಕೊನೆಯಲ್ಲಿ ಈ ಹೂವು ಸಾಹಿತ್ಯದಲ್ಲಿ ಹೇಗೆ ಕಾಣಿಸಿಕೊಂಡಿದೆಯೆನ್ನುವುದರ ಉಲ್ಲೇಖವಿದೆ. ದಿವಾಕರರು ಬ್ಲೇಕ್‌ನನ್ನು, ಗಿನ್ಸ್‌ಬರ್ಗ್‌ನನ್ನು ಗಮನಿಸುತ್ತಾರೆ. ಆದರೆ, ಅದೇಕೋ ಈ ಹೂವು 'ಸೂರ್ಯಪಾನ' ಬೇಂದ್ರೆಯವರ ಒಂದು ಕವನ ಸಂಗ್ರಹಕ್ಕೆ ಶೀರ್ಷಿಕೆ ಇತ್ತಿದೆ ಎನ್ನುವುದನ್ನು ಅವರು ಗಮನಿಸಿಲ್ಲ. ಬ್ಲೇಕ್ ಮತ್ತು ಗಿನ್ಸ್‌ಬರ್ಗ್‌ನಂತೆ ಬೇಂದ್ರೆಯವರೂ ಅದನ್ನೊಂದು ಸಂಕೇತವನ್ನಾಗಿಯೇ ಗಮನಿಸಿದ್ದಾರೆ:

ಬಾನಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವದು.

ರಸ, ಬೆಳಕುಗಳ ಐಕ್ಯ ಕವಿಯ ಆದರ್ಶವೂ ಆಗಿರುವುದರಿಂದ ಈ ಹೂವು ಅವರಿಗೆ ಸಾರ್ಥಕ ಪ್ರತಿಮೆಯಾಗುತ್ತದೆ. ಪ್ರಬಂಧದ ಕೊನೆಯಲ್ಲಿ ಬರುವ ವೀಸೆಂಥಾಲ್ ಎಂಬ ಯಹೂದಿ ಲೇಖಕನ 'ದಿ ಮರ್ಡರರ್ಸ್ ಅಮಾಂಗ್ ಅಸ್' ಎಂಬ ದುರಂತ ಕಥನದ ಭಾಗ ಪ್ರಬಂಧಕ್ಕೆ ಅನಿರೀಕ್ಷಿತ ತಿರುವು ಕೊಡುತ್ತದೆ. ಈ ಕಥನಕ್ಕೆ ಸಂವಾದಿಯಾದ ಶೋಕರಸಪ್ರಧಾನವಾದ 'ಸೂರ್ಯಕಾಂತ' ಎಂಬ ಕರ್ನಾಟಕ ಸಂಗೀತದ ರಾಗ ದಿವಾಕರರಲ್ಲಿ ವಿಷಾದಕ್ಕೆ ಕಾರಣವಾಗುತ್ತದೆ: "ಸೂರ್ಯಕಾಂತಿ ಸುಂದರವಾದ ಹೂವು, ಹೌದು. ಆದರೆ ನನಗೇಕೋ ಅದನ್ನು ಬಿಸಿಲಲ್ಲಿ ನೋಡಿದಾಗಲೆಲ್ಲ ವಿಷಾದದ ರಾಗವೊಂದು ಕೇಳಿದಂತಾಗುತ್ತದೆ." (ಪು. 170) ಈ ಎರಡೂ ನಿದರ್ಶನಗಳು ತೋರಿಸುವಂತೆ, ವಸ್ತು, ವ್ಯಕ್ತಿ, ಘಟನೆಗಳ ಸ್ವರೂಪದ ಬಗೆಗಿರುವ ಜಿಜ್ಞಾಸೆಯಂತೆ ಪ್ರತೀಕಗಳ ರಹಸ್ಯಮಯತೆಯೂ ಅವರ ಬರವಣಿಗೆಯನ್ನು ಪ್ರಚೋದಿಸುತ್ತವೆ. ಈ ಸಂಗ್ರಹದ 'ಜಗಲಿ ಮತ್ತು ಹಿತ್ತಲು', 'ಜ್ವಾಲಾಮುಖಿ', 'ಲೈಬ್ರರಿಯೆಂಬ ಸಮಾನಾಂತರ ವಿಶ್ವ', 'ತೋರುಬೆರಳು ತೋರಲೇಕೆ?' – ಇಂಥ ಪ್ರಬಂಧಗಳು ಈ ಮಾತಿಗೆ ಸಾಕ್ಷಿಯಾಗಿವೆ. ದಿವಾಕರರ ಚಿಂತನೆಯೇ ರೂಪಕಾತ್ಮಕವಾಗಿರುವುದರಿಂದ ಅವರ ಬರಹಗಳಲ್ಲಿ ರೂಪಕಗಳೇ ಕೇಂದ್ರಸ್ಥಾನದಲ್ಲಿರುವುದು ಸ್ವಾಭಾವಿಕವೇ ಆಗಿದೆ.

ಸಾಹಿತ್ಯ ಪ್ರಕಾರಗಳ ಸ್ವರೂಪದ ಚಿಂತನೆ ನನ್ನ ಮುಖ್ಯ ಆಸ್ಥೆಯ ವಿಷಯವಾದ್ದರಿಂದ ಸಂಗ್ರಹದ 'ಸಾಹಿತ್ಯವೆಂಬ ಕಲ್ಪನಾಲೋಕ' ಹಾಗೂ 'ಅತಿ ಸಣ್ಣಕತೆ ಬರೆಯುವುದು ಹೇಗೆ?' ನನಗೆ ಮಹತ್ವದ ಪ್ರಬಂಧಗಳೆನಿಸಿದವು. "ಲೇಖಕ ಹೇಳಬೇಕಾದದ್ದನ್ನು ಸಾಹಿತ್ಯದ ಪ್ರಕಾರಗಳೇ ನಿರ್ಧರಿಸುತ್ತವೆ"